**ಸಾಮ್ಯಮ್ ಉಪೈತಿ', 'ಪರಂ ಜ್ಯೋತಿಃ ಉಪಸಂಪದ್ಯ ಸ್ವೇನರೂಪೇಣ ಅಭಿನಿಷ್ಪದ್ಯತೇ'** ಎಂಬುದಾಗಿ ಮುಕ್ತರ ಸ್ವಭಾವವನ್ನು ಉಪನಿಷತ್ತು ತಿಳಿಸುತ್ತದೆ. **'ಅಜೋ ನಿತ್ಯಃ ಶಾಶ್ವತೋಽಯಂ ಪುರಾಣಃ'** ಮುಂತಾದ ವಾಕ್ಯಗಳ ಮೂಲಕ ಜೀವರು ನಿತ್ಯರು, ಜನ್ಮವಿಲ್ಲದವರು ಎಂಬುದನ್ನು ಶ್ರುತಿ ತಿಳಿಸುತ್ತದೆ.

### ಈಶ್ವರತತ್ತ್ವ

ಈಶ್ವರನು ಚೇತನನೇ ಆದರೂ, ಸ್ವರೂಪದಲ್ಲೂ ಮತ್ತು ಸ್ವಭಾವದಲ್ಲೂ, ಜೀವರಿಗಿಂತ ಅತ್ಯಂತ ಭಿನ್ನನಾಗಿದ್ದಾನೆ. ಆದ್ದರಿಂದ ವೇದಪ್ರಮಾಣಕ್ಕನುಗುಣವಾಗಿ ಈಶ್ವರನು **'ಸ್ವೇತರ–ಸಮಸ್ತ–ವಿಲಕ್ಷಣ'** ಎಂದು ಈ ಸಿದ್ಧಾಂತದಲ್ಲಿ ಸ್ಥಾಪಿಸಲಾಗಿದೆ. ಈಶ್ವರನು ವಿಭುಸ್ವರೂಪನು, ಶ್ರೀವಿಶಿಷ್ಟನು, ದೋಷರಹಿತನು, ಸಕಲಕಲ್ಯಾಣ ಗುಣಾಕರನು, ಜಗದೇಕಕಾರಣನು, ಎಲ್ಲರನ್ನೂ ನಿಯಮಿಸುವವನು, ಎಲ್ಲರಲ್ಲೂ ಅಂತರ್ಯಾಮಿಯಾಗಿರುವವನು, ಸರ್ವರಕ್ಷಕನು, ಮೋಕ್ಷದವರೆಗೆ ಸಕಲ ಫಲಗಳನ್ನೂ ಕೊಡುವವನು ಮತ್ತು ಎಲ್ಲವನ್ನೂ ತನ್ನ ಶರೀರವನ್ನಾಗಿ ಹೊಂದಿರುವವನು. ಈ ಪರಬ್ರಹ್ಮವನ್ನು ಶ್ರುತಿಪ್ರಮಾಣಗಳಿಂದಲೇ ತಿಳಿಯಲು ಸಾಧ್ಯ. ಈ ಈಶ್ವರನನ್ನು ಪಡೆಯಲು 'ಭಕ್ತಿಯೋಗ' ಮತ್ತು 'ಪ್ರಪತ್ತಿ'ಗಳೇ ಮಾರ್ಗಗಳು. ಈಶ್ವರನ ಗುಣಗಳು ಅನಂತವಾಗಿದ್ದು, ಅವನನ್ನು ಸಂಪೂರ್ಣವಾಗಿ ಅರಿಯಲು ಯಾರಿಂದಲೂ ಸಾಧ್ಯವಿಲ್ಲ. ಪರಮಾತ್ಮನ ಸ್ವರೂಪವನ್ನು ಪೂರ್ಣವಾಗಿ ಅರಿಯಲು ಸಾಧ್ಯವಿಲ್ಲವೆಂದೇ ಕೇನೋಪನಿಷತ್ತು ಪರಮಾತ್ಮನ ಮಹಿಮೆಯನ್ನು ಹೀಗೆ ಸ್ತುತಿಸುತ್ತದೆ: **ಯಸ್ಯ ಅಮತಂ ತಸ್ಯ ಮತಂ ಮತಂ ಯಸ್ಯ ನ ವೇದ ಸಃ । ಅವಿಜ್ಞಾತಂ ವಿಜಾನತಾಂ ವಿಜ್ಞಾತಂ ಅವಿಜಾನತಾಂ ॥ (೨.೩)** – "ಯಾವನಿಗೆ ಬ್ರಹ್ಮವನ್ನು ಅರಿತಿದ್ದೇನೆಂಬ ತಿಳಿವಳಿಕೆ ಇಲ್ಲವೋ, ಅವನಿಗೆ ನಿಜವಾಗಿಯೂ ತಿಳಿದಿದೆ. ಯಾವನಿಗೆ ಬ್ರಹ್ಮವನ್ನು ಅರಿತಿದ್ದೇನೆಂಬ ತಿಳಿವಳಿಕೆ ಇದೆಯೋ ಅವನು ಅರಿಯನು. ತಿಳಿದವರಿಗೆ ತಿಳಿಯದೆ ಇರುತ್ತದೆ. ತಿಳಿಯದವರಿಗೆ ತಿಳಿದಿರುತ್ತದೆ."

### ಉಪಾಯ ಸ್ವರೂಪ

ಭಗವಂತನ ಕೈಂಕರ್ಯರೂಪವಾದ ಮೋಕ್ಷವನ್ನು ಹೊಂದಲು 'ಭಕ್ತಿಯೋಗ' ಮತ್ತು 'ಪ್ರಪತ್ತಿ'ಗಳು ನೇರ ಉಪಾಯಗಳು. ಭಕ್ತಿಯೋಗದ ಸಾಧನೆಯನ್ನು ಮಾಡಲು **ಅಧಿಕಾರ, ಶಕ್ತಿ, ಜ್ಞಾನ** – ಇವೆಲ್ಲವೂ ಸಾಧಕನಿಗೆ ಅವಶ್ಯಕ. ಆದರೆ, ಪ್ರಪತ್ತಿಗೆ ಇವಾವುದೂ ಬೇಕಿಲ್ಲ. ಪ್ರಪತ್ತಿಗೆ ಬೇಕಾದುದು **ಮಹಾವಿಶ್ವಾಸ, ಆಕಿಂಚನ್ಯ, ಅನನ್ಯಗತಿತ್ವ, ನಮಗೂ ಭಗವಂತನಿಗೂ ದಾಸ–ಸ್ವಾಮಿ ಸಂಬಂಧವೆನ್ನುವ ಜ್ಞಾನ** ಮುಂತಾದವು ಮಾತ್ರ. ಇವೆಲ್ಲವುಗಳಿಂದ ಭಗವಂತನಿಗೆ ನಮ್ಮ ಆತ್ಮನನ್ನು ಸಮರ್ಪಿಸುವುದೇ **ಪ್ರಪತ್ತಿ**. ಈ ಉಪಾಯ ಸಹ ಉಪನಿಷತ್ತಿನಲ್ಲಿ ಪ್ರತಿಪಾದಿಸಲ್ಪಟ್ಟಿದೆ. **'ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ', 'ನಮ ಉಕ್ತಿಂ ವಿಧೇಮ, ವಯಮಿಂದ್ರ ತ್ವಾ ಯವಃ'** ಮುಂತಾಗಿ. ಭಕ್ತಿಯೋಗವೇ ಮುಂತಾದ ಯಾವ ಉಪಾಯವನ್ನೂ ಮಾಡಲು ನಮಗೆ ಸಾಮರ್ಥ್ಯವಿಲ್ಲವೆಂದು ಚೆನ್ನಾಗಿ ಅರಿತುಕೊಂಡು, ಭಗವಂತನಲ್ಲಿ ನಮ್ಮ ಆತ್ಮವನ್ನು ಸಮರ್ಪಿಸಿಕೊಳ್ಳುವುದೇ ಪ್ರಪತ್ತಿ. ಈ ರೀತಿಯಲ್ಲಿ ಮಹಾವಿಶ್ವಾಸಪೂರ್ವಕವಾಗಿ ನಮ್ಮನ್ನು ನಾವು ಸಮರ್ಪಿಸಿಕೊಂಡಾಗ ಭಗವಂತನು ನಮ್ಮನ್ನು ರಕ್ಷಿಸಿ, ದೇಹಾವಸಾನದ ಸಮಯದಲ್ಲಿ ನಮಗೆ ಮೋಕ್ಷವನ್ನು ಅನುಗ್ರಹಿಸುತ್ತಾನೆ. ಈ ಉಪಾಯವನ್ನು ಜಾತಿ ಕುಲ ಮತಭೇದವಿಲ್ಲದೆ ಸಕಲರೂ ಅನುಷ್ಠಾನ ಮಾಡಬಹುದು. ಭಕ್ತಿಯೋಗಕ್ಕೆ ಯಾವ ಫಲ ದೊರಕುವುದೋ ಅದೇ ಫಲವು, ಪ್ರಪತ್ತಿಗೂ ಸಹ ದೊರಕುವುದೆಂದು ವೇದಗಳು, ಸ್ಮೃತಿಗಳು ಮತ್ತು ಇತಿಹಾಸ ಪುರಾಣಗಳು ಸಾರುತ್ತವೆ. ಈ ಶರಣಾಗತಿಗೆ, ಭಗವಂತನಿಗೆ ಸಮಾನವಾದ ಸ್ವರೂಪ ಗುಣ ವಿಭವಗಳನ್ನುಳ್ಳ ಶ್ರೀಮಹಾಲಕ್ಷ್ಮಿಯು ನಮಗೆಲ್ಲ ತಾಯಿಯಂತೆ ಇದ್ದುಕೊಂಡು, ಜೀವಾತ್ಮರು ಭಗವಂತನನ್ನು ಸುಲಭವಾಗಿ ಸಮೀಪಿಸಲು ಸಹಾಯ ಮಾಡುತ್ತಾಳೆ.

### ಮೋಕ್ಷಸ್ವರೂಪ

ಜೀವರು ಕರ್ಮಬಂಧವನ್ನು ಕಳೆದುಕೊಂಡು ಪರಮಪದವನ್ನು ಸೇರಿದಾಗ, ಪರಮಾತ್ಮನಿಗೆ ಸಮಾನವಾದ ಜ್ಞಾನಾನಂದಗಳನ್ನು ಹೊಂದುತ್ತಾರೆ. ಆ ಸ್ಥಿತಿಯಲ್ಲಿಯೂ ಸಹ ಅವರು ಭಗವಂತನಿಗೆ ದಾಸರಾಗಿಯೇ ಇರುವರು. ಆದರೆ ಅವರಿಗೆ ಜಗತ್ತಿನ ವ್ಯಾಪಾರಗಳ ಸಂಬಂಧ ಸರ್ವಥಾ ಇರುವುದಿಲ್ಲ. ಅವರಿಗೆ ಭಗವಂತನೊಡನೆ ಸಮಾನವಾದ ಆನಂದಾನುಭವ ಉಂಟೆಂದು ಶ್ರುತಿಗಳೂ, ಬ್ರಹ್ಮಸೂತ್ರಗಳೂ ತಿಳಿಸುತ್ತವೆ. ಮೋಕ್ಷದಲ್ಲಿ, ಹಿಂದೆ ಉಲ್ಲೇಖಿಸಿದ ಜೀವರ ಎಂಟು ಗುಣಗಳು ಪೂರ್ಣವಾಗಿ ವಿಕಾಸಗೊಳ್ಳುತ್ತವೆ. ಹಾಗೆಯೇ ಅವರ **ಧರ್ಮಭೂತಜ್ಞಾನ** (ಜೀವಾತ್ಮರ ಗುಣವಾದ ಜ್ಞಾನ) ಕೂಡ ಪೂರ್ಣವಾಗಿ ವಿಕಸಿಸುತ್ತದೆ. ಹೀಗಾಗಿ ಮುಕ್ತರಾದವರು ಮತ್ತೆಂದಿಗೂ ಕರ್ಮಬಂಧನಕ್ಕೆ ಒಳಗಾಗುವುದಿಲ್ಲ.

### ಉಪಸಂಹಾರ

ಹೀಗೆ ವಿಶಿಷ್ಟಾದ್ವೈತ ದರ್ಶನವು ಭಗವದ್ರಾಮಾನುಜರೇ ಮೊದಲಾದ ಆಚಾರ್ಯರುಗಳು ಶ್ರುತಿ ಸ್ಮೃತಿ ಇತಿಹಾಸ ಪುರಾಣಗಳೆಲ್ಲದರ ಆಧಾರದಿಂದ ಪ್ರತಿಪಾದಿಸಿದ ಸಿದ್ಧಾಂತವಾಗಿದೆ. ಈ ಸಿದ್ಧಾಂತದ ಪ್ರಕಾರ, ಸಕಲಕಲ್ಯಾಣಗುಣಾಕರನಾದ, ದೋಷದೂರನಾದ, ಜಗತ್ಕಾರಣನಾದ, ಸರ್ವರಕ್ಷಕನಾದ, ಸರ್ವೇಶ್ವರನಾದ, ಸರ್ವಶರೀರಿಯಾದ ಶ್ರೀಮನ್ನಾರಾಯಣನೇ ಪರತತ್ತ್ವನಾಗಿದ್ದಾನೆ. ಮತ್ತೆಲ್ಲವೂ ಅವನಿಗೆ ಶರೀರಭೂತವಾದ, ಅವನಿಗಧೀನವಾದ ತತ್ತ್ವಗಳು. ಈ ತತ್ತ್ವಗಳೆಲ್ಲವೂ ಸತ್ಯವಾದುವು, ನಿತ್ಯವಾದುವು.

ಕರ್ಮನಾಶವಾಗಿ ಭಗವಂತನ ನಿತ್ಯಕೈಂಕರ್ಯ ಪಡೆಯುವುದೇ ಜೀವರಿಗೆ ಇರುವ ಪರಮಪುರುಷಾರ್ಥ. ಇದನ್ನು ಪಡೆಯಲು ಪ್ರಪತ್ತಿ ಅಥವಾ ಶರಣಾಗತಿಯೇ ಪರಮಸುಲಭವಾದ ಉಪಾಯ. ಈ ಎಲ್ಲ ಸತ್ಯಗಳನ್ನು ಪ್ರಾಚೀನ ಆಚಾರ್ಯರು ಪ್ರಮಾಣಪೂರ್ವಕವಾಗಿ ಈ ಸಿದ್ಧಾಂತದಲ್ಲಿ ಸಂಸ್ಥಾಪಿಸಿದ್ದಾರೆ. ಪ್ರಪತ್ತಿಯು ನೇರವಾಗಿ ಮೋಕ್ಷಸಾಧನವಾಗಿದ್ದು, ಜಾತಿ ಮತ ಭೇದವಿಲ್ಲದೆ, ಸರ್ವರಿಗೂ ಇದರಲ್ಲಿ ಅಧಿಕಾರವಿದೆ ಎನ್ನುವುದು ಈ ದರ್ಶನದ ಉದಾತ್ತ ನಿಲುವು. ಹೀಗೆ ಪ್ರಪಂಚದ ಎಲ್ಲ ಜೀವರೂ ಸಹ ಮೋಕ್ಷವನ್ನು ಪಡೆಯಲು ಸಾಧ್ಯವೆಂಬ ನಿಲುವನ್ನು ಹೊಂದಿರುವುದೇ, ಈ ದರ್ಶನದ ಅಸಾಧಾರಣವಾದ ಕೊಡುಗೆಯಾಗಿದೆ.